**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 140/2015**

**ಫ್ರಾಸಾ- 25 ಚಾಸಾ- 39**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರಮಾನಂದ್ ಶೆಣೈ ಎಸ್ |
| ತಂದೆಯ ಹೆಸರುಃ | : | ಲೇಟ್ ಎಸ್ ಸುಂದರ್ ಶೆಣೈ |
| ವಯಸ್ಸುಃ | : | 70 ವರ್ಷ |
| ಉದ್ಯೋಗಃ | : | ನಿವೃತ್ತ ಆದಾಯ ತೆರಿಗೆ ಅಧಿಕಾರಿ |
| ವಾಸ | : | ಮಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 06-03-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಹಾಸನದ ಆದಾಯ ತೆರಿಗೆ ಇಲಾಖೆಯ ವಾರ್ಡ್ ನಂಬರ್ 2 ರಲ್ಲಿ ಆದಾಯ ತೆರಿಗೆ ಅಧಿಕಾರಿಯಾಗಿ 2013 ರಿಂದ 31-5-2015ರವರಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಏಪ್ರಿಲ್ 2014ರಲ್ಲಿ ವಾರ್ಡ್ ನಂಬರ್1 ರ ಪ್ರಭಾರದಲ್ಲಿದ್ದೆನು.

2.ದಿನಾಂಕ 4-4-2014ರಲ್ಲಿ ಹಾಸನದ ಲೋಕಾಯುಕ್ತ ಪೊಲೀಸ್ ನಿರೀಕ್ಷಕರು ಎಸ್ ಎಂ ಸುದರ್ಶನ್, ಪದ್ಮಾವತಿ, ಸಿ.ಅರ್. ಮಂಜುನಾಥ್‌ಇವರಿಗೆ ಸೇರಿದ ಆದಾಯ ತೆರಿಗೆ ರಿಟರ್ನ್ಸ್ ಮತ್ತು ಇತರ ದಾಖಲೆಗಳನ್ನು ನೀಡುವಂತೆ ಆದಾಯ ತೆರಿಗೆ ಇಲಾಖೆಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದರು. ಆಯುಕ್ತರು ಅದನ್ನು ವಾರ್ಡ್ ನಂಬರ್1ರ ಕಛೇರಿಗೆ ಕಳುಹಿಸಿಕೊಟ್ಟಿದ್ದರು. ಸದರಿ ಕಛೇರಿಯ ಪ್ರಭಾರದಲ್ಲಿ ನಾನು ಇದ್ದುದರಿಂದ ಆಯುಕ್ತರ ಅನುಮತಿ ಪಡೆದು ಈ ಮೇಲೆ ಹೇಳಿದ ವ್ಯಕ್ತಿಗಳಿಗೆ ಸಂಬಂಧಿಸಿದ ಆದಾಯತೆರಿಗೆ ರಿಟರ್ನ್ಸ್ ಮತ್ತು ಇತರ

ದಾಖಲಾತಿಗಳನ್ನು ಡೌನ್ಲೋಡ್ ಮಾಡಿಕೊಂಡು ದೃಢೀಕರಿಸಿ ಲೋಕಾಯಕ್ತ ಪೊಲೀಸ್ ನಿರೀಕ್ಷಕರಿಗೆ ಕಳುಹಿಸಿಕೊಟ್ಟಿರುತ್ತೇನೆ. ಈ 3 ವ್ಯಕ್ತಿಗಳ ಪೈಕಿ ಸಿ.ಅರ್. ಮಂಜುನಾಥ್ ರವರು ಯಾವತ್ತೂ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿರಲಿಲ್ಲ ಆದ್ದರಿಂದ ಅವರ ಮಾಹಿತಿಯನ್ನು ನೀಡಲಾಗಿಲ್ಲ. ಪೊಲೀಸ್ ನಿರೀಕ್ಷಕರು ಸಲ್ಲಿಸಿದ 3 ಮನವಿ ಪತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ-134 ರಿಂದ 136 ಎಂದು ಗುರುತಿಸಲಾಯಿತು. ಪೊಲೀಸ್ ಅಧೀಕ್ಷಕರು ಆದಾಯ ತೆರಿಗೆ ಇಲಾಖೆಯ ಆಯುಕ್ತರಿಗೆ ಬರೆದಿರುವ 3 ಮನವಿ ಪತ್ರಗಳನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-137 ರಿಂದ 139 ಎಂದು ಗುರುತಿಸಲಾಯಿತು. ನಾನು ದೃಢೀಕರಿಸಿ ಕೊಟ್ಟಂತಹ ದಾಖಲೆಗಳನ್ನು ನೋಡುತ್ತಿದ್ದು ಅವುಗಳು ಒಟ್ಟು 38 ಹಾಳೆಗಳನ್ನು ಒಳಗೊಂಡಿರುತ್ತದೆ. (ಆರೋಪಿತರ ಪರ ವಕೀಲರು ಇದಕ್ಕೆ ಸಂಬಂಧಿಸಿದಂತೆ ಭಾ.ಸಾ.ಅ.ನಿ.ಕಲಂ 65ಬಿ ಅನ್ವಯ ದೃಢಪತ್ರವನ್ನು ಹಾಜರುಪಡಿಸದೇ ಇರುವುದರಿಂದ ದಾಖಲೆಗಳನ್ನು ಗುರುತಿಸಲು ಬರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ) ಆರೋಪಿತರ ಪರ ವಕೀಲರ ತಕರಾರಿಗೊಳಪಟ್ಟು ಹಾಗೂ ಸಾಕ್ಷ್ಯಬೆಲೆಗೊಳಪಟ್ಟು ಈ 38 ಹಾಳೆಗಳನ್ನು ಒಟ್ಟಾಗಿ  ನಿಪಿ-140 ಎಂದು ಗುರುತಿಸಲಾಯಿತು. ಸದರಿ ದಾಖಲೆಗಳನ್ನು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ದಿನಾಂಕ 24-6-2014ರಂದು ಪತ್ರದೊಂದಿಗೆ ಕಳುಹಿಸಿರುತ್ತೇನೆ. ಆ ಪತ್ರವನ್ನು ಈಗ ನೋಡುತ್ತಿದ್ದು ನಿಪಿ-141 ಎಂದು ಗುರುತಿಸಲಾಯಿತು. ನಿಪಿ-141ರಲ್ಲಿ ನನ್ನ ರುಜು ಇದ್ದು ಅದನ್ನು ನಿಪಿ-141(ಎ)ಎಂದು ಗುರುತಿಸಲಾಯಿತು. ನಿಪಿ-140ನ್ನು ದೃಢೀಕರಿಸಿ ಕೊಟ್ಟ ಬಗ್ಗೆ ನನ್ನ ರುಜುವನ್ನು ಹಾಕಿರುತ್ತೇನೆ. ನಿಪಿ-140ರಲ್ಲಿರುವ ಸಾಕ್ಷಿಯ ರುಜುವನ್ನು ಒಟ್ಟಾಗಿ ನಿಪಿ-140(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಸಿ ಎನ್ ವಿ **ವಕೀಲರಿಂದಃ**

ನಿಪಿ-140ರಲ್ಲಿ ಕಂಡುಬರುವ ಸುದರ್ಶನ್ ಎಂಬುವವರಿಗೆ ಸಂಬಂಧಿಸಿದ ಆದಾಯ ತೆರಿಗೆ  ರಿಟರ್ನ್ಸ್ ನಲ್ಲಿ ಅವರು ಕಟ್ಟಬೇಕಾದ ತೆರಿಗೆ ಹಣ ಶೂನ್ಯ ಎಂದು ಕಾಣಿಸಿದೆ ಎಂದರೆ ಸರಿ.

ಪದ್ಮಾವತಿಯವರು 2012-13ನೇ ಸಾಲಿನಲ್ಲಿ ಸಲ್ಲಿಸಿರುವ ಆದಾಯ ತೆರಿಗೆ ರಿಟರ್ನ್ ಪ್ರಕಾರ ಅವರು ಕಟ್ಟಿರುವ ತೆರಿಗೆ ಹಣ 2970 ಹಾಗೂ 2013-14ನೇ ಸಾಲಿನಲ್ಲಿ ಕಟ್ಟಿರುವ ತೆರಿಗೆ ಹಣ 2770 ಎಂದು ಕಂಡುಬರುತ್ತದೆ ಎಂದರೆ ಸರಿ. ಆದ್ದರಿಂದ ಪದ್ಮಾವತಿಯವರಿಗೆ ಸ್ವಂತ ಆದಾಯ ಇತ್ತು ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**